| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 573/2020**

**ಪಿ.ಡಬ್ಲ್ಯು ಃ 3 ಸಿ.ಡಬ್ಲ್ಯು ಃ 2**

ಸಾಕ್ಷಿದಾರನ ಹೆಸರು ಃ ಪುರುಷೋತ್ತಮ
ತಂದೆಯ ಹೆಸರು ಃ ಹೀರಾ ಗೌಡ
ಪ್ರಾಯ ಃ 25 ವರ್ಷ
ಉದ್ಯೋಗ ಃ ಖಾಸಗಿ
ವಾಸ ಃ ಶಿರಸಿ

ದಿನಾಂಕ 26.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಚಾಸಾ-1, 3 ರಿಂದ 9 ರವರ ಪರಿಚಯ ಇದೆ. ಅವರು ನನ್ನೊಂದಿಗೆ ಘಟನೆ ದಿನ ಕೆಲಸ ಮಾಡುತ್ತಿದ್ದವರು. ಮೃತ ಗುರುರಾಜ್ ರವರ ಪರಿಚಯ ಇದೆ. ಅವರು ನನ್ನೊಂದಿಗೆ ಘಟನೆ ದಿನ ಕೆಲಸ ಮಾಡುತ್ತಿದ್ದವರು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸುಮಾರು 2-3 ವರ್ಷಗಳ ಹಿಂದೆ ಮಧ್ಯಾಹ್ನ 12.30 ಗಂಟೆಗೆ ಕಬ್ಬಿನಾಲೆಯಲ್ಲಿ ವಿದ್ಯುತ್ ಕಂಬ ಮುರಿದಿತ್ತು ಸದ್ರಿ ಕಂಬವನ್ನು ತೆಗೆದು ಹೊಸ ಕಂಬವನ್ನು ಅಳವಡಿಸುವ ಕೆಲಸಕ್ಕೆ ಹೋಗಿದ್ದು, ಸ್ಥಳಕ್ಕೆ ಹೋಗಿ ನೋಡಲಾಗಿ ವಿದ್ಯುತ್ ಕಂಬ ಮುರಿದು ವೈಯರ್ ಗಳು ಕಂಬದಲ್ಲಿ ನೇತಾಡುತ್ತಿದ್ದವು. ಕಂಬವು ಪೂರ್ತಿಯಾಗಿ ಮುರಿಯದಿದ್ದ ಕಾರಣ ಹೊಸ ಕಂಬವನ್ನು ಅಳವಡಿಸಲು ಮುರಿದ ಕಂಬವನ್ನು ಕೆಳಗೆ ಬೀಳಿಸುವ ಸಲುವಾಗಿ ತುಂಡಾದ ವಿದ್ಯುತ್ ಕಂಬದಲ್ಲಿನ ವೈಯರ್ ಗಳನ್ನು ನಾನು, ಚಾಸಾ-1, 4, 5, 6 ಮತ್ತು ಇತರರು ಹಾಗೂ ಮೃತ ಗುರುರಾಜ್ ಹಿಡಿದು ಎಳೆಯುತ್ತಿರುವಾಗ ಗುಡುಗು ಸಿಡಿಲು ಬಂದಾಗ

ವೈಯರ್ ನಲ್ಲಿ ವಿದ್ಯುತ್ ಹರಿದ ಪರಿಣಾಮ ಗುರುರಾಜ್ ರವರು ಮೃತಪಟ್ಟಿರುತ್ತಾರೆ. ನನಗೆ ಕಾಲಿಗೆ ಜಾರಿ ಬಿದ್ದು ತರಚಿದ ಗಾಯವಾಗಿರುತ್ತದೆ. ಉಳಿದವರಿಗೆ ಏನಾಗಿರುತ್ತದೆ ಎಂದು ಗೊತ್ತಿಲ್ಲ. ನಂತರ ನಾವೆಲ್ಲರೂ ಆಸ್ಪತ್ರೆಗೆ ಬಂದು ಪ್ರಥಮ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ. ಆಸ್ಪತ್ರೆಯಲ್ಲಿ ವೈದ್ಯರು ಗುರುರಾಜ್ ರವರನ್ನು ಪರೀಕ್ಷಿಸಿ ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ಆರೋಪಿತರ ನಿರ್ಲಕ್ಷತನದಿಂದ ಘಟನೆ ಸಂಭವಿಸಿರುತ್ತದೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ-**

2. ಈಗ ನನಗೆ ಓದಿ ಹೇಳಿದಂತೆ ದಿಃ01.08.2019 ರಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು** : 2ನೇ ಆರೋಪಿ ಪರ : ಶ್ರೀ ಪಿ ಎ ಎಸ್ ವಕೀಲರಿಂದ :

ಘಟನೆಯಾಗಿದೆ ಎಂದು ಹೇಳುವ 2 ತಿಂಗಳಿನಿಂದ 2ನೇ ಆರೋಪಿಯ ಬಳಿ ಕೆಲಸ ಮಾಡುತ್ತಿದ್ದೆ. ಎಲೆಕ್ಟ್ರಿಕ್ ಕಂಬದ ಎತ್ತರ 6 ಮೀಟರ್. ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಇರುವ ಅಂತರ 22 ಮೀಟರ್. ಹೈಟೆನ್ಷನ್ ವಯರ್ ಇರುವಂತಹ ಕಂಬಗಳು 80 ಮೀಟರ್ ದೂರದಲ್ಲಿ ಇದ್ದವು. ಅವುಗಳ ಎತ್ತರ ನೆಲದಿಂದ 33-35 ಮೀಟರ್ ಇರಬಹುದು. ಅಪಘಾತ ಸಮಯದಲ್ಲಿ ಕಂಬಗಳಿಂದ ಎಲೆಕ್ಟ್ರಿಕ್ ವಯರ್ ಗಳನ್ನು ಕಳಚಿರಲಿಲ್ಲ ಮತ್ತು ಅದು ಕಂಬದಲ್ಲಿ ಬಿಗಿಯಾಗಿ

ಕಟ್ಟಿಲಾಗಿತ್ತು. ಮುರಿದ ವಿದ್ಯುತ್ ಕಂಬವು ಸಿಮೆಂಟ್ ಕಂಬ ಆಗಿದ್ದು ಅದಕ್ಕೆ ಕಬ್ಬಿಣದ ಸರಳು ಇದ್ದ ಕಾರಣ ಕಂಬವು ಮುರಿದು ಬೇರೆಯಾಗಿರುವುದಿಲ್ಲ. ಯಾವುದೇ ವಯರ್ ತುಂಡಾಗಿರಲಿಲ್ಲ. 2 ಕಂಬಗಳು ತಲಾ 6 ಮಿ. ಇರುವುದರಿಂದ ಯಾವ ಕಡೆ ಬಿದ್ದರು ಅವುಗಳ ಅಂತರ 12 ಮಿ. ಗಿಂತ ಜಾಸ್ತಿ ಆಗುವುದಿಲ್ಲ ಎಂದರೆ ಸರಿ. 2 ಮರದ ಕಂಬಗಳು ನೆಲದಲ್ಲಿ ಹೂಳಲ್ಪಟ್ಟಿತ್ತು ಮತ್ತು ಅವುಗಳು ಬಗ್ಗಿದ್ದವು ಮತ್ತು ನೆಲದಿಂದ ಬೇರ್ಪಟ್ಟಿರಲಿಲ್ಲ. ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ವಿದ್ಯುತ್ ವಯರ್ ಗಳನ್ನು ಬಿಗಿಯಾಗಿ ಕಟ್ಟಿದ್ದರಿಂದ ಅವುಗಳು ಜೋತುಬಿದ್ದಿರಲಿಲ್ಲ. ನೆಲದಿಂದ ವಯರ್ ಗಳು ಯಾವ ರೀತಿಯಲ್ಲಿಯೂ ಮೇಲಕ್ಕೆ ಎಸೆಯಲ್ಪಟ್ಟರು 35 ಮಿಟರ್ ಎತ್ತರಕ್ಕೆ ಹೋಗುವುದಿಲ್ಲ ಹಾಗೂ 80 ಮೀಟರ್ ದೂರವನ್ನು ಕ್ರಮಿಸುವುದಿಲ್ಲ. ಅಡ್ಡ ಬಿದ್ದಂತಹ ಕಂಬದ ವಯರ್ ಗಳು 6 ಮೀಟರ್ ಗಿಂತ ಹೆಚ್ಚು ಹೋಗಲು ಸಾಧ್ಯವಿಲ್ಲ. ಈ ವಯರ್ ಗಳು ಘಟನ ಸಮಯದಂದು ಹೈನ್ಷನ್ ವಯರ್ ಗೆ ತಾಗಿದ್ದನ್ನು ನಾನು ನೋಡಿರುವುದಿಲ್ಲ. ಹೈನ್ಷನ್ ವಯರ್ ಗಳು 35 ಮೀ ಎತ್ತರ ಮತ್ತು 80 ದೂರದಲ್ಲಿ ಇದ್ದ ಕಾರಣ ಲೊ ಟೆನ್ಷನ್ ನ ಮುರಿದು ಬಿದ್ದ ಕಂಬದ ವಯರ್ ಗಳು ಅಷ್ಟು ದೂರ ಮತ್ತು ಎತ್ತರಕ್ಕೆ ಕ್ರಮಿಸಲು ಸಾಧ್ಯವಿಲ್ಲ ಎಂದರೆ ಸರಿ.

ಘಟನಾ ಸಮಯದಲ್ಲಿ ಲೊ ಟೆನ್ಷನ್ ವಯರ್ ನಲ್ಲಿ ವಿದ್ಯುತ್ ಸಂಚಾರ ಇರಲಿಲ್ಲ. ವಿದ್ಯುತ್ ಸಂಪರ್ಕ ಇರಲಿಲ್ಲ, ನಾವು ಹಾಗೂ ಲೈನ್ ಮೆನ್ ಅದನ್ನು ಪರಾಂಭರಿಸಿ ದೃಢಿಕರಿಸಿದ್ದೇವೆ. ಆ ನಂತರ ಕೆಲಸ ಮಾಡಲು ಪ್ರಾರಂಭಿಸಿರುತ್ತೇವೆ. ಹೈ ಟೆನ್ಷನ್ ನ ಕಂಬ ಸಮೀಪ ವಿದ್ಯುತ್ ವಯರ್ ನ್ನು ಚಾಸಾ-3 ಹಿಡಿದುಕೊಂಡಿದ್ದು ಮೃತ ಗುರುರಾಜ್ ರವರು ಕೊನೆಯಲ್ಲಿದ್ದರು. ಹೈ ಟೆನ್ಷನ್ ವಯರ್ ನಿಂದಾಗಿ ಶಾಕ್ ಹೊಡೆದಿದ್ದರೆ ಮೊದಲು ಪ್ರಾರಂಭದಲ್ಲಿ ಇದ್ದ ಚಾಸಾ-3 ರವರಿಗೆ ನಂತರ ಕೊನೆಯಲ್ಲಿದ್ದ ಮೃತ ಗುರುರಾಜ್ ಗೆ ಶಾಕ್ ಹೊಡೆಯಬೇಕಿತ್ತು. ಹೈ ಟೆನ್ಷನ್ ನಿಂದ

ಪ್ರಸವಿಸಿದ ವಿದ್ಯುತ್ ನಿಂದ ಚಾಸಾ-3 ರವರಿಗೆ ಯಾವುದೇ ವಿದ್ಯುತ್ ಶಾಕ್ ಗಾಯ ಆಗಿರಲಿಲ್ಲ. ನನಗೆ ವಿದ್ಯುತ್ ನಿಂದ ಯಾವುದೇ ವಿದ್ಯುತ್ ಶಾಕ್ ಗಾಯ ಆಗಿರಲಿಲ್ಲ. ನನಗೆ ಹಾಗೂ ಚಾಸಾ-3 ರವರಿಗೆ ಜಾರಿ ಬಿದ್ದು ತರಚಿದ ಗಾಯ ಆಗಿರುತ್ತದೆ.

ಘಟನೆ ನಡೆದಿದೆ ಎಂದು ಹೇಳುವ ಸಮಯ ಮಳೆಗಾಲ. ಮಳೆಗಾಲದಲ್ಲಿ ಹೆಚ್ಚಾರಿ ಗುಡುಗು ಮಿಂಚು ಇರುತ್ತದೆ. ಗುಡುಗು ಮಿಂಚಿನಿಂದ ಯಾವ ಬದಿಯಿಂದ ಗುಡುಗು ಹೊಡೆಯಿತೊ ಆ ಬದಿಯಿಂದ ವಿದ್ಯುತ್ ಪ್ರವಾಹಿಸುತ್ತದೆ ಎಂದರೆ ಸರಿ. ವಿದ್ಯುತ್ ತಂತಿಗಳು ಕಂಬದಿಂದ ಕಂಬಕ್ಕೆ ನೇರವಾಗಿ ಹಾದುಹೋಗಿದ್ದು ಅವುಗಳ ಕಂಬಗಳಿಗೆ ಹರಿಯದ ಹಾಗೆ ಇನ್ಸುಲೆಟರ್ ವ್ಯವಸ್ಥೆ ಇದೆ ಎಂದರೆ ಸರಿ. ಆ ವ್ಯವಸ್ಥೆ ಇದ್ದ ಕಾರಣ ಕಂಬಗಳಿಗೆ ನೇರವಾಗಿ ವಿದ್ಯುತ್ ಪ್ರವಾಹಿಸದೆ ನೇರವಾಗಿ ವಯರ್ ಗಳಿಂದ ವಯರ್ ಗಳಿಗೆ ಪ್ರವಾಹಿಸುತ್ತದೆ. ವಯರ್ ನಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದರೂ ಮಿಂಚಿನಿಂದಾಗಿ ವಿದ್ಯುತ್ ವಯರ್ ಗಳಲ್ಲಿ ವಿದ್ಯುತ್ ಪ್ರವಾಹಿಸುತ್ತದೆ ಎಂದರೆ ಸರಿ. ಮಿಂಚಿನ ಕಾರಣದಿಂದಾಗಿ ಮಳೆಗಾಲದಲ್ಲಿ ಮನೆಗಳಲ್ಲಿ ವಿದ್ಯುತ್ ಉಪಕರಣಗಳು ಸುಟ್ಟು ಹೋಗುತ್ತವೆ ಎಂದರೆ ಸರಿ. ಹೆಚ್ಚಿನ ಜನರು ತಮ್ಮ ಮನೆಗಳಲ್ಲಿ ಇಂತಹ ಅನಾಹುತ ಆಗುತ್ತದೆ ಎಂಬ ಕಾರಣಕ್ಕೆ ಮೈನ್ ಸ್ವಿಚ್ ನ್ನು ಆಫ್ ಮಾಡಿರುತ್ತಾರೆ. ಮಳೆಗಾಲದ ಸಮಯದಲ್ಲಿ ಮನೆಗಳಲ್ಲಿ ವಿದ್ಯುತ್ ಸ್ವಿಚ್ ಹಾಕುವಾಗ ಅಥವಾ ಮೊಬೈಲ್ ಚಾರ್ಜ್ ಹಾಕುವಾಗ ಮತ್ತು ಮೊಬೈಲ್ ಮಾತನಾಡುವಾಗ ಮಿಂಚು ಬರುವಾಗ ವಿದ್ಯುತ್ ಶಾಕ್ ಹೊಡೆದು ಮರಣ ಸಂಭವಿಸಿರುತ್ತದೆ ಎಂದರೆ ಸರಿ. ಅದೇ ರೀತಿ ಮರದ ಅಡಿಯಲ್ಲಿ ನಿಂತವರು ಸಹ ಮಿಂಚು ಹೊಡೆದ ಕಾರಣ ವಿದ್ಯುತ್ ಸಂಪರ್ಕ ಹೊಂದಿ ಸುಟ್ಟ ಗಾಯ ಸಂಭವಿಸಿ ಮರಣ ಹೊಂದುತ್ತಾರೆ ಎಂದರೆ ಸರಿ. ಆದ ಕಾರಣ ಮಳೆಗಾಲದಲ್ಲಿ ಸಿಡಿಲು

ಮಿಂಚು ಬರುವಾಗ ಮರದ ಅಡಿಯಲ್ಲಿ ಸಹ ಜನರು ನಿಲ್ಲಬಾರದು ಹಾಗೂ ಮೊಬೈಲ್ ನಲ್ಲಿ ಮಾತನಾಡಬಾರದು.

ಹೈ ಟೆನ್ಷನ್ ವಯರ್ ಕಂಬದ ಹತ್ತಿರ ಚಾಸಾ-3, ನಾನು, ಚಾಸಾ-4 ನಂತರ ಮೃತ ಗುರುರಾಜ್ ಇದ್ದರು. ಹೈ ಟೆನ್ಷನ್ ವಯರ್ ನಿಂದ ವಿದ್ಯುತ್ ಸಂಪರ್ಕ ಬಂದಿದ್ದಲ್ಲಿ ಪ್ರಥಮ ಅಘಾತ ಚಾಸಾ-3 ರವರಿಗೆ ಆಗಬೇಕಿತ್ತು. ಮಿಂಚಿನ ಕಾರಣದಿಂದ ವಿದ್ಯುತ್ ವಿರುದ್ದ ದಿಕ್ಕಿನಿಂದ ಬಂದ ಪ್ರವೇಶಿಸಿದ ಕಾರಣ ಪ್ರಥಮವಾಗಿ ಮೃತ ಗುರುರಾಜ್ ರವರಿಗೆ ವಿದ್ಯುತ್ ಸಂಪರ್ಕವಾಯಿತು. ಮಿಂಚಿನಂದ ಆದ ಘಟನೆಗಳನ್ನು ನಾವು Act of God ಎಂದು ಪರಿಗಣಿಸಬಹುದು. ನಿಪಿ-2 ಭಾವಚಿತ್ರದಲ್ಲಿ ಹೈ ಟೆನ್ಷನ್ ವಯರ್ ಎಷ್ಟು ದೂರದಲ್ಲಿ ಇದೆ ಎಂದು ಗೊತ್ತಾಗುವುದಿಲ್ಲ. ಒಂದು ವೇಳೆ ಹೈ ಟೆನ್ಷನ್ ವಯರ್ ಗಳು ಲೊ ಟೆನ್ಷನ್ ವಯರ್ ನಿಂದ ನಿಲುಕುವಷ್ಟು ಅಂತರದಲ್ಲಿದ್ದರೆ ಅದು ನಿಪಿ-2 ಭಾವಚಿತ್ರದಲ್ಲಿ ಕಾಣುತ್ತಿತ್ತು. ಮೃತ ಗುರುರಾಜ್ ರವರಿಗೆ ಮಿಂಚಿನ ಕಾರಣದಿಂದ ವಿದ್ಯುತ್ ಶಾಕ್ ಹೊಡೆದಿದೆ ಹೈ ಟೆನ್ಷನ್ ನಿಂದ ಅಲ್ಲ ಎಂದರೆ ಸರಿ.

**<u>ಪಾಟೀ ಸವಾಲು</u>** : 1 ಮತ್ತು 3ನೇ ಆರೋಪಿತರ ಪರ : ಶ್ರೀ ಎಸ್ ಕೆ ಜೆ ವಕೀಲರು 2ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ